**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ**

**ಸಿಸಿ ನಂ. 444/2024**

**ಚಾಸಾಃ 5/ಪ್ರಾಸಾಃ 4**

**ದಿನಾಂಕಃ 29-07-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಎಫ ವಾಯ ಡಿ ಆರೋಪಿ ಪರ ವಕೀಲರಿಂದಃ**

ಚಾಸಾ-1 ರವರು ಆರೋಪಿತನೊಂದಿಗೆ ದೂರು ಮತ್ತು ಪಂಚನಾಮೆ ಹಾಜರು ಪಡಿಸಿರುತ್ತಾರೆ. ದೂರನ್ನು ಗಣಕೀಕರಣ ಮಾಡಿಸಿ ನೀಡಿರುತ್ತಾರೆ. ಸದರಿ ದೂರನ್ನು ಗಣಕೀಕರಣ ಮಾಡಿದ ಠಾಣಾ ಸಿಬ್ಬಂದಿಯ ಹೆಸರು ಗೊತ್ತಿಲ್ಲ. ಠಾಣೆಯಿಂದ ಮಾರುತಿ ನಗರ ಕ್ರಾಸ ಅರ್ಧ ಕಿಲೋ ಮೀಟರ ಅಂತರದಲ್ಲಿದೆ. ಠಾಣೆಯ ಮುಂದೆ ಇರುವ ರಸ್ತೆಯಲ್ಲಿ ಯಾವಾಗಲೂ ಹೆಚ್ಚಿನ ಜನ ಸಂಚಾರ ಇರುತ್ತದೆ ಎಂದರೆ ಸರಿ. ದಾಳಿಯ ಸಮಯದಲ್ಲಿ ಹಾಜರಿದ್ದ ಸ್ಥಳೀಯರ ಹೇಳಿಕೆಯನ್ನು ಚಾಸಾ-1 ರವರು ಹಾಜರು ಪಡಿಸಿರುವುದಿಲ್ಲ. ಚಾಸಾ-1 ನನ್ನ ಮೇಲಾಧಿಕಾರಿಯೆಂದರೆ ಸರಿ. ಸದರಿ ಅಧಿಕಾರಿಯ ಸೂಚನೆಗಳನ್ನು ಪಾಲಿಸುತ್ತೇವೆ ಎಂದರೆ ಸರಿ. ಕಾರಣ ಚಾಸಾ-1 ರವರ ಸೂಚನೆ ಮೇರೆಗೆ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಛೇರಿಯ ಅಂಕಿ ಅಂಶಗಳಿಗಾಗಿ ಚಾಸಾ-1 ರವರು ದಾಖಲಿಸಿರುವ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸರಿಯಾದ ತನಿಖೆ ಕೈಗೊಳ್ಳದೆ ಆರೋಪಿತನ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಜೆ ಎಂ ಎಫ್ ಸಿ ನರಗುಂದ